ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 72-81
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸವಿತಾ ನಾಗಭೂಷಣ ಅವರ ಸ್ತ್ರೀಲೋಕ ಕಾದಂಬರಿಯಲ್ಲಿ ಸಾಮಾಜಿಕ ಚಿತ್ರಣ

**ಮಹದೇವ[1] ಮತ್ತು ಡಾ. ಎಂ ಎನ್ ನಂದೀಶ[2]**
[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು.

**Abstract:**
*'ಪ್ರತಿಯೊಂದು ಸಾಹಿತ್ಯದ ಬೆಳವಣಿಗೆಯಲ್ಲಿ ಕಾಲಘಟ್ಟ ಹಾಗೂ ಅದು ಬೆಳೆದು ಬಂದ ದಾರಿ ಮುಖ್ಯವಾಗಿರುತ್ತದೆ. ಎಲ್ಲಾ ನದಿಗಳು ಅಂತಿಮವಾಗಿ ಸಮುದ್ರವನ್ನು ಸೇರುವಂತೆ, ಒಂದು ಸಾಹಿತ್ಯವು ಹಲವಾರು ಪ್ರಕಾರಗಳಿಂದ ರೂಪುಗೊಂಡಿದೆ. ಕಾವ್ಯ, ಕಾದಂಬರಿ, ಸಣ್ಣಕತೆ, ವಿಮರ್ಶೆ, ನಾಟಕ, ಕವಿತೆ, ಜೀವನ ಚರಿತ್ರೆ, ಸಂಶೋಧನೆ ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳನ್ನು ನೋಡಬಹುದು. ಈ ಎಲ್ಲಾ ಪ್ರಕಾರಗಳಿಗೂ, ತನ್ನದೇ ಆದ ಹಿನ್ನೆಲೆ ಇದೆ. ಅದರಲ್ಲಿ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಕಾದಂಬರಿ ಪ್ರಕಾರ ಪ್ರಮುಖ ಕಾರಣ ಎಂದರೆ ತಪ್ಪಾಗುವುದಿಲ್ಲ. ಹೀಗೆ ಪ್ರಸಿದ್ಧಿ ಪಡೆದ ಕಾದಂಬರಿ ಪ್ರಕಾರ ಇಂದು ಕನ್ನಡ ಸಾಹಿತ್ಯದ ಜನಪ್ರಿಯ ಪ್ರಕಾರಗಳಲ್ಲಿ ಒಂದಾಗಿದೆ. ಕಾದಂಬರಿ ಪ್ರಕಾರ ಪ್ರಸಿದ್ಧಿ ಪಡೆಯಲು ಅನೇಕ ಕವಿಗಳು, ಸಾಹಿತಿಗಳು, ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಸವಿತಾ ನಾಗಭೂಷಣ ಅವರ ಕಾದಂಬರಿಗಳ ವಸ್ತು ಧೋರಣೆಯನ್ನು ಕುರಿತು ವಿಶ್ಲೇಷಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಸ್ತ್ರೀ ಸಾಹಿತ್ಯ, ಸ್ತ್ರೀಲೋಕ, ಬದುಕು, ಸವಿತಾ ನಾಗಭೂಷಣ.*

## ಪೀಠಿಕೆ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದ ತ್ರಿವೇಣಿಯವರು, ಸ್ತ್ರೀಯರು ಹೆಚ್ಚಾಗಿ ಬರೆಯದೇ ಇದ್ದ ಕಾಲದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿ ಕಡಿಮೆ ಕಾಲಘಟ್ಟದಲ್ಲಿ ಅಸಾಧಾರಣ ಜನಪ್ರಿಯತೆಯನ್ನು ಗಳಿಸಿದವರು. ಇವರ ನಂತರದಲ್ಲಿ ಎಂ.ಕೆ.ಇಂದಿರಾ, ಅನುಪಮ ನಿರಂಜನ, ಹೆಚ್.ಎಸ್.ಪಾರ್ವತಿ, ಸಿ.ಎನ್.ಜಯಲಕ್ಷ್ಮಿ, ಗೀತಾ ನಾಗಭೂಷಣ, ಹೆಚ್.ನಾಗವೇಣಿ, ಸವಿತಾ ನಾಗಭೂಷಣ ಹೀಗೆ ಮಹಿಳೆಯರೂ ಕೂಡ ಕಾದಂಬರಿ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಗೀತಾ ನಾಗಭೂಷಣ ಅವರ 'ಬದುಕು' ಕಾದಂಬರಿ ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು. ಈ ನಿಟ್ಟಿನಲ್ಲಿ ಸವಿತಾ ನಾಗಭೂಷಣ ಅವರ 'ಸ್ತ್ರೀ ಲೋಕ' ಕಾದಂಬರಿಯೂ ಕೂಡ ಒಂದು.

ಸವಿತಾ ನಾಗಭೂಷಣ ಅವರ 'ಸ್ತ್ರೀ ಲೋಕ' ಕಾದಂಬರಿಯು ಸವಿತಾ ನಾಗಭೂಷಣ ಅವರ ಚಿಂತನೆಯಲ್ಲಿ ಮೂಡಿ ಬಂದಿರುವ ವಿಶಿಷ್ಟ ಪ್ರಯೋಗವಾಗಿದ್ದು, ನೋಡಲು ನಾಟಕದಂತೆ ಕಾಣುವ, ಆದರೆ ವಸ್ತುವಿನ ದೃಷ್ಟಿಯಿಂದ ಇದನ್ನು 'ಕಾದಂಬರಿ' ಎಂದೇ ಹೆಸರಿಸಬೇಕಾಗುತ್ತದೆ. ಕಾದಂಬರಿಯ ಹೆಸರೇ ಸೂಚಿಸುವ ಹಾಗೆ ಇದು

**Please cite this article as:** ಮಹದೇವ ಮತ್ತು ಎಂ. ಎನ್. ನಂದೀಶ. (2025). ಸವಿತಾ ನಾಗಭೂಷಣ ಅವರ ಸ್ತ್ರೀಲೋಕ ಕಾದಂಬರಿಯಲ್ಲಿ ಸಾಮಾಜಿಕ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(6), 72–81

'ಸ್ತ್ರೀಲೋಕ' ಸ್ತ್ರೀಯರ ಲೋಕ. ಇಲ್ಲಿ ಪುರುಷ ಪಾತ್ರಗಳಿಗೆ ಅಷ್ಟೇನು ಅವಕಾಶ ಇಲ್ಲ. ಸಂದರ್ಭಕ್ಕೆ ಅಲ್ಲಿ ಇಲ್ಲಿ ಎಲ್ಲೋ ಒಂದು ಬಂದು ಹೋಗುತ್ತದೆ.

ಸವಿತಾ ನಾಗಭೂಷಣ ಅವರು ಚಿಕ್ಕ ಹುಡುಗಿಯಾಗಿದ್ದಾಗ ಅವರ ಅಜ್ಜಿಯನ್ನು (ಗುಲಾಬಿ) ಭೇಟಿಯಾಗಲು ಬೇರೆ ಬೇರೆ ಹೆಂಗಸರು ಆಗಾಗ ಬರುತ್ತಿದ್ದರು. ಅವರಲ್ಲಿ ಕೆಲವರು ಅತ್ತು, ಗೋಳಾಡುತ್ತ ತಮ್ಮ ಮನದ ಸಂಕಟವನ್ನು ಅಜ್ಜಿಯ ಹತ್ತಿರ ಹೇಳಿಕೊಳ್ಳುತ್ತಿದ್ದರು. ಅದಕ್ಕೆ ಪ್ರತ್ಯುತ್ತರವಾಗಿ ಆ ಅಜ್ಜಿ ಸಮಾಧಾನದ ಮಾತುಗಳನ್ನು ಅವರಿಗೆ ಹೇಳುತ್ತಿದ್ದರು. ಎಲ್ಲವೂ ಮುಗಿದ ಮೇಲೆ ಅಜ್ಜಿಯಿಂದ ಏನಾದರು ಪಡೆದು ಹೋಗುತ್ತಿದ್ದರು. ಈ ಅಜ್ಜಿಯ ಆಶ್ರಯದಲ್ಲಿ ಒಬ್ಬ ಹೆಂಗಸು ಜೀವನ ಮಾಡುತ್ತಿದ್ದಳು. ಅವಳು ಮನೆ ಕೆಲಸದಲ್ಲಿ ಅವರಿಗೆ ನೆರವಾಗುತ್ತಿದ್ದಳು. ಒಬ್ಬಂಟಿಯಾಗಿ ಜೀವನ ಸಾಗಿಸುತ್ತಿದ್ದ ಆ ಅಜ್ಜಿಗೆ ಆಕೆ ಆಪ್ತ ಸಹಾಯಕಿಯಾಗಿ, ಆಪ್ತ ಬಂಧುವಾಗಿ ಜೊತೆಯಾಗಿದ್ದಳು. ಆಕೆಗೆ ಸ್ವಲ್ಪ ಬುದ್ಧಿ ಭ್ರಮಣೆ, ಆದ್ದರಿಂದ ಅಜ್ಜಿ (ಗುಲಾಬಿ) ಆಕೆಯನ್ನು ಸ್ವಲ್ಪ ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದರು. ಹಾಗೆಯೇ ಸವಿತಾ ನಾಗಭೂಷಣ ಅವರ ಅಜ್ಜಿಯ ಮನೆಗೆ ಬರುತ್ತಿದ್ದ ನೆಂಟರ ಹುಡುಗಿಯೊಬ್ಬಳು ಒಮ್ಮೆ ಚಿಕ್ಕ ವಯಸ್ಸಿನಲ್ಲಿ ಸವಿತಾ ನಾಗಭೂಷಣ ಅವರ ಮುಖವನ್ನು ಉಗುರಿನಿಂದ ಗಿಬರಿ ರಕ್ತ ಬರುವಂತೆ ಮಾಡಿದ್ದಳು. ಇದರ ವಿಚಾರವಾಗಿ ತಮ್ಮ ತಾಯಿಯ ಬಳಿ ಹೇಳಿದಾಗ ಅವರ ತಾಯಿ ಆ ಹುಡುಗಿಯನ್ನು ಕರೆದು ಬುದ್ಧಿ ಹೇಳಿ ತಿನ್ನಲು ತಿಂಡಿ ಕೊಟ್ಟು ಕಳುಹಿಸಿದರು. ಜೊತೆಗೆ ಸವಿತಾ ನಾಗಭೂಷಣ ಅವರಿಗೆ ಆ ಹುಡುಗಿ ಮತ್ತೆ ಹಾಗೆ ಮಾಡಲು ಬಂದರೆ ಓಡಿ ತಪ್ಪಿಸಿಕೊಳ್ಳಬೇಕು ಎಂದು ಉಪಾಯ ಹೇಳಿಕೊಟ್ಟರು.

ಹೀಗೆ ಸವಿತಾ ನಾಗಭೂಷಣ ಅವರು ಬಾಲ್ಯದಲ್ಲಿ ಎದುರುಗೊಂಡ ಪ್ರೀತಿ, ಕರುಣೆ, ಸಹನೆ, ಜವಾಬ್ದಾರಿ, ಕಷ್ಟ–ನಷ್ಟದ ಪ್ರಪಂಚ 'ಸ್ತ್ರೀಲೋಕ' ಎಂಬ ಕಾದಂಬರಿ ರಚನೆಯಾಗಲು ಮುಖ್ಯ ಕಾರಣ.

ಮತ್ತೊಂದು ಪ್ರಮುಖವಾದ ವಿಚಾರ ಒಂದು ದಿನ ಸೋನೆ ಮಳೆಯು ಸಂಜೆಯಲ್ಲಿ ಅವರ ಮನೆಯ ಬಾಗಿಲಿನಲ್ಲಿ ಮಳೆಯಲ್ಲಿ ನೆನೆದು ಒದ್ದೆಯಾಗಿದ್ದ ಒಬ್ಬ ಮಹಿಳೆ ಹಾಗೂ ಅವಳ ಮಕ್ಕಳ ದೃಶ್ಯ ಇವರ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳಿಗೆ ದಾರಿ ಮಾಡಿಕೊಟ್ಟಿತು. ಆ ಎಳೆಯ ಜೀವಗಳ ಜೋಡಿ ಹಾಕಿದ ಮೋಡಿಗೆ ಒಳಗಾಗಿ ಏನು ಮಾಡಲು ತೋಚದೆ ತನ್ನ ತಾಯಿಯ ಮಡಿಲಿನಲ್ಲಿ ಎದೆಗೆ ಅವುಚಿಕೊಂಡು ಮಲಗಿರಲು, ತಮ್ಮ ತಾಯಿ, ಅಜ್ಜಿ, ಅಕ್ಕ, ಎಲ್ಲರೂ ಒಮ್ಮೆ ಕಣ್ಮುಂದೆ ಬಂದು ಹೋದಂತಾಗಿ, ಆ ಚಿತ್ರಣ ಮನಸ್ಸಿನಲ್ಲಿ ಉಳಿದು. ಇದರ ಪ್ರಭಾವದಿಂದಾಗಿ ಸ್ತ್ರೀಯರ ಕಷ್ಟಗಳು ಬದುಕಿನ ಹೋರಾಟ, ಎಲ್ಲವೂ ಇವರ 'ಸ್ತ್ರೀಲೋಕ' ಕೃತಿಯ ರಚನೆಗೆ ಕಾರಣವಾಯಿತು. ಈ ಕಾದಂಬರಿಯಲ್ಲಿ ಪಾತ್ರಧಾರಿಗಳು ಬಹುತೇಕ ಹೆಂಗಸರು, ಗಂಡಸರು ಏನಿದ್ದರೂ ನೆಪಮಾತ್ರ ಅಂದರೆ ಸೂಚಕ ಮಾತ್ರವಷ್ಟೆ.

**ಸಾಮಾಜಿಕ ಚಿತ್ರಣ**

ಸ್ತ್ರೀಲೋಕ ಕಾದಂಬರಿಯನ್ನು ಓದುತ್ತಾ ಹೋದಂತೆಲ್ಲಾ ಹಲವು ವಿಚಾರಗಳು ಮನಸ್ಸಿನಲ್ಲಿ ಮೂಡುತ್ತವೆ. ಇಲ್ಲಿ ಸಾಮಾಜಿಕ ಅಂಶಗಳು, ಕೌಟುಂಬಿಕ ನೆಲೆಗಟ್ಟು, ಕಾಮ, ಪ್ರೇಮ, ತಿರಸ್ಕಾರ ಎಲ್ಲವೂ ತೆರೆಯುತ್ತಾ ಸಾಗುತ್ತವೆ. ಕಟ್ಟುಪಾಡುಗಳು, ಜಾತೀಯತೆ, ಅಂತರ್‌ಜಾತಿ ವಿವಾಹ, ಸಮಾನತೆ, ಪುರುಷ ಪ್ರಧಾನ ಸಮಾಜದ ಧೋರಣೆ, ಸಾಮಾಜಿಕ ಬದಲಾವಣೆ, ವೇಶ್ಯಾವಾಟಿಕೆ, ಭ್ರಷ್ಟಾಚಾರ, ವರದಕ್ಷಿಣೆ ಹೀಗೆ ಸಾಮಾಜಿಕ ಚಿತ್ರಣ ತೆರೆದುಕೊಳ್ಳುತ್ತದೆ. ಇಲ್ಲಿ ಬರುವ ಪ್ರತಿಯೊಂದು ಪಾತ್ರವು ತನ್ನದೇ ಆದ ಪ್ರಪಂಚವನ್ನು ತೆರೆದು, ಜೀವನದ ಸತ್ಯಾಸತ್ಯತೆಯನ್ನು ಹೇಳುತ್ತದೆ. ಕಟ್ಟುಪಾಡುಗಳನ್ನು ಮೀರಿ ನಿಲ್ಲುವ ಅನೇಕ ಪ್ರಸಂಗಗಳನ್ನು ಇಲ್ಲಿ ಕಾಣಬಹುದು.

ಕಾದಂಬರಿಯ ಮೊದಲ ಭಾಗದಲ್ಲಿಯೇ ಈ ಸಮಾಜದ ಕಟ್ಟುಪಾಡುಗಳನ್ನು ಮೀರಿ ನಿಲ್ಲುವ ಪ್ರಸಂಗ ಉಂಟು. ಅಲ್ಲಿ ಕಂಡು ಬರುವ ಗುಲಾಬಿ

ಎಂಬ ಅಜ್ಜಿ 80 ರ ದಶಕದಲ್ಲಿಯೇ ಕಟ್ಟುಪಾಡುಗಳನ್ನು ಮೀರಿ ನಿಲ್ಲುತ್ತಾಳೆ. ಸಂಪ್ರದಾಯಗಳಿಗೆ ಕಟ್ಟುಬೀಳದ ಗುಲಾಭಿ ತನ್ನ ಕಾಲದಲ್ಲಿ ವಿಧವಾ ವಿವಾಹ ಪದ್ಧತಿಯನ್ನು ಪ್ರೋತ್ಸಾಹಿಸುತ್ತಾರೆ. ತನ್ನ ಗಂಡ ತೀರಿಕೊಂಡ ನಂತರ ತನಗೆ ಇಷ್ಟವಿಲ್ಲದಿದ್ದರೂ ಬಿಳಿಯ ಸೀರೆಯನ್ನು ತೊಡುತ್ತಾರೆ. ಆದರೆ ಅದನ್ನು ಮೀರಿ ಕುಂಕುಮ ಹಚ್ಚಿಕೊಳ್ಳುವ ಹೂ ಮುಡಿಯುವ ಪ್ರಸಂಗ ಗಂಡು ಹೆಣ್ಣು ಇಬ್ಬರೂ ಸಮಾನರು ಇಬ್ಬರಿಗೂ ಸಮಾನ ನ್ಯಾಯ ಎಂಬುದನ್ನು ತಿಳಿಸುತ್ತದೆ. ಹಾಗೆಯೇ ಪುರುಷ ಪ್ರಧಾನ ವ್ಯವಸ್ಥೆಯಿಂದ ಮನನೊಂದು ತನಗೆ ವಿವಾಹ ಆಗಿಲ್ಲದಿದ್ದರೂ, ಬಿಳಿಯ ಸೀರೆಯುಟ್ಟು ವಿಧವೆಯಂತೆ ಬದುಕುವ ಬೆಳ್ಳಿ ಅಸಹಾಯಕ ಸ್ಥಿತಿಯಲ್ಲಿ ಕಂಡುಬರುತ್ತಾಳೆ, ಜೀವನ ಪೂರ್ತಿ ಒಂಟಿಯಾಗಿ ಬದುಕುತ್ತಾಳೆ. ಗುಲಾಭಿಯೂ ಸಾಮಾಜಿಕ ಸುಧಾರಣೆಯ ಒಂದು ನಿದರ್ಶನ. "ಕೂಸೆ ಈ ಅಜ್ಜಿ ಸುಮಾರಿನವಳಲ್ಲ ತಿಳಿದುಕೋ ನಾನೇ ನಿಂತು ನಾಲ್ಕು ಜನ ವಿಧವೆಯರಿಗೆ ಮದುವೆ ಮಾಡಿಸಿದ್ದೀನಿ. ಈ ಇದೇ ಕೈಯಿಂದಾನೆ ಕತ್ತಿನ ಸರ ತೆಗೆದು ಗಾಂಧೀಜಿಗೆ ಕೊಟ್ಟೋಳು ನಾನು"[3] ಎಂದು ಹೇಳುವ ಗುಲಾಬಿ ಆ ಕಾಲದ ಆದರ್ಶ ಸ್ತ್ರೀ ಆಗಿ ಕಂಡುಬರುತ್ತಾಳೆ. 'ಒಂದು ಒಡವೆಯ ಪ್ರಸಂಗ' ಎಂಬ ಘಟದಲ್ಲಿ ಕನ್ನಡ ಇಂಗ್ಲೀಷ್ ನಡುವಿನ ವಿಚಾರದಲ್ಲಿ ಇಂಗ್ಲೀಷ್ ಶಾಲೆಗಳನ್ನು ದಿಕ್ಕರಿಸಿ ಕನ್ನಡ ಶಾಲೆಗಳಿಗೆ ಪ್ರೋತ್ಸಾಹ ನೀಡುವ ವಿಚಾರವನ್ನು ಕಾಣಬಹುದು. ಈ ಕಾದಂಬರಿಯಲ್ಲಿ ನಾನು ಎಂದು ಗುರುತಿಸಿಕೊಂಡ ಪಾತ್ರ ಸಮ. ಪಿ.ಯು.ಸಿ.ಯಲ್ಲಿಯೇ ವಿವಾಹವಾಗುತ್ತಿರುವ ರೇಣುವಿನ ಬಾಲ್ಯ ವಿವಾಹವನ್ನು ತಮ್ಮದೇ ಮಾತುಗಳಿಂದ ವಿರೋಧಿಸುತ್ತಾರೆ. ಬಾಲ್ಯ ವಿವಾಹ ಹೆಣ್ಣು ಮಕ್ಕಳಿಗೆ ಹೇಗೆ ಮುಂದಿನ ಜೀವನದಲ್ಲಿ ಮುಳ್ಳಾಗುತ್ತದೆ ಎಂಬುದನ್ನು ಕುರಿತು ವಿರೋಧಿಸುತ್ತಾರೆ. 'ಪುಟಾಣಿಯ ಪಟ್ಟು' ಇಲ್ಲಿ ಗಮನಿಸಬೇಕಾದ ಒಂದು ಘಟಕ. ಶತಮಾನಗಳಿಂದ ಕಟ್ಟು–ಪಾಡುಗಳಿಗೆ ಒಳಗಾಗಿ, ರೂಢಿಯಲ್ಲಿರುವ 'ಮುಟ್ಟಿನ' ಬಗ್ಗೆ ಹಾಗೂ ಅದರ ವಿಧಿ, ವಿಧಾನಗಳ ಬಗ್ಗೆ ತಿಳಿಸಿಕೊಡುತ್ತದೆ. ಸುಮಾ ತನ್ನ ಗೆಳತಿ ರಶ್ಮಿಯ ಮನೆಗೆ ಬಂದಾಗ ಇಬ್ಬರ ನಡುವೆ ಚರ್ಚೆಯಾಗುವ ಮುಟ್ಟಿನ ವಿಚಾರ, ಅದನ್ನು ತಿರಸ್ಕರಿಸುವ ರಶ್ಮಿಯ ಧೋರಣೆಯನ್ನು ಇಲ್ಲಿ ಕಾಣಬಹುದು. 'ಮುಟ್ಟಿನ' ವಿಚಾರವನ್ನು ಕೆಲವರು ಕಡ್ಡಾಯವಾಗಿ ಪಾಲಿಸಲೇಬೇಕು ಎಂಬಂತೆ ಪಾಲಿಸುತ್ತಿದ್ದಾರೆ.

ಆದರೆ ಕೆಲವು ಹೆಣ್ಣು ಮಕ್ಕಳಿಗೆ ಅದು ಬಲತ್ಕಾರದ ಆಚರಣೆಯಾಗಿದೆ. ಶಿಕ್ಷಣ ಹಾಗೂ ಆಧುನಿಕತೆ ಹೆಚ್ಚಾದಂತೆ, ಅದರ ಬಗೆಗಿನ ತಿರಸ್ಕಾರ ಹೆಚ್ಚಾಗುತ್ತಿರುವುದನ್ನು ಕಾಣಬಹುದು. ಒಂದು ಹೆಣ್ಣು 'ಮುಟ್ಟಾದರೆ' ಅವಳು ಯಾರನ್ನು ಮುಟ್ಟಿಸಿಕೊಳ್ಳುವಂತಿಲ್ಲ ಜೊತೆಗೆ ಅವಳನ್ನು ಯಾರು ಕೂಡ ಮುಟ್ಟಬಾರದು, 'ಮುಟ್ಟಾದ' ಹೆಣ್ಣು 3 ದಿನ ಮನೆಯ ಹೊರಗೆ ಇರಬೇಕು ಎಂಬ ಅನೇಕ ಕಟ್ಟುಪಾಡುಗಳನ್ನು ಶ್ವೇತಾಳ ಮೂಲಕ ಸಮರ್ಥನೆ ನೀಡುವುದನ್ನು ಕಾಣಬಹುದು. ಮುಂದುವರಿದು 'ಗಂಡಂದಿರು ನೀರು ಸೇದಿದರು ಎಂಬ ಘಟಕದಲ್ಲಿ' ಪ್ರತಿಮಾ ಎಂಬ ಹೆಣ್ಣೊಬ್ಬಳು ತನ್ನ ಅತ್ತೆಯ ಮನೆಯಲ್ಲಿ ಅನಾದಿ ಕಾಲದಿಂದಲೂ ಆಚರಣೆಯಲ್ಲಿದ್ದ ಕಟ್ಟುಪಾಡೊಂದನ್ನು ಬದಲಾಯಿಸುವ ಚಿತ್ರಣವಿದೆ. ಕೆಳವರ್ಗದವರು ಮುಟ್ಟಿದರೆ 'ಮೈಲಿಗೆ ಆಗುತ್ತದೆ ಎಂಬ ವಿಚಾರಗಳನ್ನು ಇಂದಿಗೂ ಎಷ್ಟೋ ಪ್ರದೇಶಗಳಲ್ಲಿ ಕಾಣಬಹುದು. ಕ್ರಮೇಣ ಪ್ರತಿಮಾ ಗರ್ಭವತಿಯಾಗುತ್ತಾಳೆ. ಈ ಪದ್ಧತಿ ಸ್ವಲ್ಪ ಬದಲಾಗುತ್ತದೆ. ಉಳಿದ ಸೊಸೆಯರು ನೀರು ಸೇದಲು ವಿರೋಧಿಸಿದಾಗ, ಕೆಲವು ದಿನ ಮನೆಯ ಗಂಡಸರಿಗೆ ನೀರು ಸೇದಬೇಕಾಗುತ್ತದೆ. ಅದರ ಕಷ್ಟವನ್ನು ಅರಿತಾಗ ನೀರನ್ನೂ ಮನೆಯ ಆಳುಗಳಿಂದಲೇ ಸೇದಿಸಬೇಕಾಗುತ್ತದೆ. ಇಲ್ಲಿ ಪ್ರತಿಮಾಳ ದಿಟ್ಟತನ, ಆಕೆಯ ಅಚಲ ನಿರ್ಧಾರ ಈ ಬದಲಾವಣೆಗೆ ಕಾರಣ

ಅನಿಷ್ಟ ಕಟ್ಟು ಪಾಡುಗಳನ್ನು ವಿರೋಧಿಸುವ ಮತ್ತೊಂದು ಘಟಕ 'ಕುಂಕುಮ ಒರೆಸಬೇಡವೇ ಅಕ್ಕಯ್ಯ' ಎಂಬ ಘಟಕ. ಹೆಣ್ಣು ಮತ್ತು ಗಂಡಿಗೆ ಇರುವ ಅಸಮಾನತೆಯನ್ನು ಇಲ್ಲಿ ಪ್ರಶ್ನಿಸಲಾಗಿದೆ. ಗೊಡ್ಡು ಸಂಪ್ರದಾಯಗಳನ್ನು ಮೆಟ್ಟಿ ನಿಲ್ಲಬೇಕು ಎಂದು ಮಹಿಳೆಯರನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ. ನಮ್ಮ ಸ್ವಾರ್ಥಕ್ಕಾಗಿ ಮತ್ತೊಂದು ಹೆಣ್ಣಿಗೆ ಅನ್ಯಾಯ ಆಗಬಾರದು ಎಂಬುದನ್ನು ತಿಳಿಸಿದ್ದಾರೆ.

ನಿರೂಪಕಿಯ (ಸುಮಾ) ಸೋದರತ್ತೆ ಕಲ್ಯಾಣಿ ಆಕೆಯ ಗಂಡ ಪದ್ದುವಿನ ಮರಣದ ಸುತ್ತಾ ನಡೆಯುವ ಘಟನೆ ಇಲ್ಲಿ ಶೋಚನೀಯವಾಗಿದೆ. ಪದ್ದುಗೆ ಕಲ್ಯಾಣಿ ಎಂಬ ಹೆಂಡತಿ ಇದ್ದರೂ ಸಹ ಆತ ಜಯಮ್ಮ ಎಂಬಾಕೆಯನ್ನು ಇಟ್ಟುಕೊಂಡಿದ್ದಾನೆ. ಅದರ ಪರಿಣಾಮ ಅವರಿಗೆ ಕಲ್ಪನಾ ಎಂಬ ಮಗಳು ಜನಿಸುತ್ತಾಳೆ. ಪದ್ದುವಿನ ಮರಣದ ನಂತರ ಈಗ ಜಯಮ್ಮನೂ ಇಲ್ಲ, ಪದ್ದುನೂ ಇಲ್ಲ, ಇರುವುದು ಪಾಪದ ಕೂಸು 'ಕಲ್ಪನಾ' ಅನಾಥೆಯಾಗಿ.

ಕಲ್ಯಾಣಿ ತನ್ನ ತಾಳಿಗೆ ಬೆಲೆ ಕೊಟ್ಟು ಎಲ್ಲಾ ವಿಧಿ ವಿಧಾನಗಳನ್ನು ನೆರವೇರಿಸಿ ಕಣ್ಣೀರು ಸುರಿಸುತ್ತಿದ್ದಾಳೆ. ಇದಕ್ಕೆ ಶಂಕರತ್ತೆ ಹೇಳುವ ಮಾತು ಇಲ್ಲಿ ಪ್ರಮುಖವಾಗಿದೆ. 'ನೀತಿ, ನಿಷ್ಠೆ, ನಿಯಮ, ಹೆಂಗಸರಿಗೆ ಮಾತ್ರ ಯಾಕೆ? ಎಂಬ ಮಾತು ಹೆಣ್ಣಿನ ಸ್ವಾತಂತ್ರ್ಯದ ಜೀವನವನ್ನು ಕುರಿತು ಹೇಳಿದಂತಿದೆ.

ಇಂತಹ ಕಟ್ಟು ಪಾಡುಗಳನ್ನು ಮೀರಿ ನಿಲ್ಲುವ ಅದೆಷ್ಟೋ ಪಾತ್ರಗಳು 'ಸ್ತ್ರೀಲೋಕ' ಕಾದಂಬರಿಯಲ್ಲಿ ಕಂಡುಬರುತ್ತದೆ. ಕೇವಲ ಕಟ್ಟುಪಾಡುಗಳಲ್ಲದೆ ಜಾತೀಯತೆಯ ವಿರುದ್ಧ ಎದ್ದು ನಿಲ್ಲುವ ಜಾತೀಯತೆಯನ್ನು ಕುರಿತು ಪ್ರಶ್ನಿಸುವ ವಿಚಾರಗಳು 'ಸ್ತ್ರೀಲೋಕ' ಕಾದಂಬರಿಯಲ್ಲಿ ಕಂಡುಬರುತ್ತದೆ.

'ಪಾರುವಿನ ಜೋರು' ಎಂಬ ಘಟಕದಲ್ಲಿ ಮಾಲೀಕ ಮತ್ತು ಕೆಲಸದವರ ನಡುವಿನ ವ್ಯತ್ಯಾಸವನ್ನು ಹಾಗೂ ಅದರ ನಿಜವಾದ ಅರ್ಥವನ್ನು ಕಾಣಬಹುದು. ಇಲ್ಲಿ ಪಾರು ತಾನು ಕೆಲಸದವಳಾದರೂ ಸ್ವಾಭಿಮಾನ ಮತ್ತು ನಿಷ್ಠೆಗೆ ತಕ್ಕವಳು. ಸಂಪ್ರದಾಯ ಜಾತೀಯತೆಗಳನ್ನು ಪ್ರಶ್ನಿಸುವ ಧೈರ್ಯ ಅವಳಲ್ಲಿದೆ. ಜಾತೀಯತೆ ಹಾಗೂ ಕೆಲಸವನ್ನು ಮೀರಿ ನಿಲ್ಲುವ ಪಾರು 'ಕಾಯಕವೇ ಕೈಲಾಸ' ಎಂಬ ಸಿದ್ಧಾಂತದ ಅನುಯಾಯಿ ಎಂದರೂ ತಪ್ಪಾಗಲಾರದು.

ಧರ್ಮ-ಧರ್ಮಗಳ ನಡುವಿನ ಕಿತ್ತಾಟ ಇಲ್ಲಿನ ಮತ್ತೊಂದು ವಿಚಾರ 'ಮೆಹರುನ್ನಿಸಳ ಪ್ರಲಾಪ' ಎಂಬ ವಿಭಾಗದಲ್ಲಿ ಧರ್ಮ-ಧರ್ಮಗಳ ನಡುವಿನ ಅಸೂಯೆಯಲ್ಲಿ ಅಮಾಯಕ ಜೀವವೊಂದು ತನ್ನ ಪ್ರಾಣ ಕಳೆದುಕೊಂಡ ವಸ್ತು ಇದೆ. ಧರ್ಮಗಳ ನಡುವಿನ ಹೋರಾಟದಲ್ಲಿ ನಿಜವಾಗಿಯೂ ಬಲಿಯಾಗುತ್ತಿರುವುದು ಯಾರು? ಎಂಬ ಪ್ರಶ್ನೆ ಇಲ್ಲಿ ಉಂಟಾಗುತ್ತದೆ.

'ಪಾರು ಕೆಲಸಕ್ಕೆ ಹೋದಾಳು' ಎಂಬ ಮತ್ತೊಂದು ವಿಭಾಗದಲ್ಲಿ ಇನ್ನೊಬ್ಬರಿಗೆ ಸಹಾಯ ಮಾಡುವ ಮನಸ್ಸು ಮಾನವೀಯತೆಯ ಲಕ್ಷಣಗಳಲ್ಲಿ ಪ್ರಮುಖವಾದುದ್ದು, ಈ ನಿಟ್ಟಿನಲ್ಲಿ ಪ್ರಜ್ಞಾ ಎಂಬ ಪಾತ್ರ ಪಾರುವಿಗೆ ಮಾಡುವ ಸಹಾಯ ಅರ್ಥಗರ್ಭಿತವಾಗಿದೆ. ಇಲ್ಲಿ ಪಾರು ಕೆಳವರ್ಗಕ್ಕೆ ಸೇರಿದ ಹೆಂಗಸಾದರೂ ಕೂಡ, ಪ್ರಜ್ಞಾ ಆಕೆಯ ಯಾವ ಜಾತಿಯನ್ನು ವಿಚಾರಿಸದೆ ತನ್ನ ಮನೆಯ ಸದಸ್ಯೆಯಂತೆ ನಡೆಸಿಕೊಳ್ಳುತ್ತಾಳೆ.

ಶ್ವೇತಾ ಮತ್ತು ಲೇಖಕಿಯ ನಡುವೆ ನಡೆಯುವ ಸಂವಾದ, ಹಾಸ್ಯವಾಗಿ ಕಂಡರೂ ಕೂಡ ವಾಸ್ತವ ಜೀವನದ ಅರಿವನ್ನು ಉಂಟಾಗಿಸುತ್ತದೆ. ಕಟ್ಟುಪಾಡುಗಳು, ಜಾತೀಯತೆಯನ್ನು ಮೀರಿ ನಿಲ್ಲುವ ಸುಮಾ, ಶ್ವೇತಾಳಿಗೆ ಬುದ್ಧಿ ಹೇಳುತ್ತಾಳೆ. ಶ್ವೇತಾಳ ಅಜ್ಜಿ ತನ್ನ ಮೊಮ್ಮಗಳಿಗೆ ಕೆಳಜಾತಿಯವರ ಮನೆಯಲ್ಲಿ ಊಟ ಮಾಡಬಾರದು, ಮಾಂಸಹಾರ ಸೇವನೆ ಮಾಡಬಾರದು ಎಂಬ ಕಟ್ಟು-ಪಾಡನ್ನು ವಿಧಿಸಿದ್ದಾರೆ. ಆದರೆ ಅದನ್ನು ವಿರೋಧಿಸುವ ಸುಮಾ

ಎಲ್ಲಾ ರೀತಿಯ ಆಹಾರ ಕ್ರಮಗಳಿಗೂ ಮನ್ನಣೆ ನೀಡುತ್ತಾರೆ.

'ನಾಸ್ತಿಕನ ಹೆಂಡತಿ' ಜಾತೀಯತೆಯನ್ನು ಮೀರಿ ನಿಲ್ಲುವ ಮತ್ತೊಂದು ಘಟಕ. ಆಸ್ತಿಕತೆಯ ಎದುರು ನಾಸ್ತಿಕತೆಯನ್ನು ಸಾರುವ ನಾಸ್ತಿಕ ರಾಜಮ್ಮಳ ಗಂಡ ಯಾವುದೇ ರೀತಿಯ ಪೂಜೆಗಳಲ್ಲಿ ಹಬ್ಬ ಹರಿದಿನಗಳಲ್ಲಿ, ಜಾತೀಯತೆಯಲ್ಲಿ ಆಸಕ್ತಿ ಇಲ್ಲದ ವ್ಯಕ್ತಿ. ಆತ ಎಲ್ಲವನ್ನು ಮೀರಿ ನಿಲ್ಲುವವನು. ಆತನ ಮನೆಯಲ್ಲಿ ಯಾವುದೇ ದೇವರ ಫೋಟೋಗಳನ್ನು ಆತ ಇಟ್ಟುಕೊಂಡಿಲ್ಲ. ಬದಲಾಗಿ ಅಂಬೇಡ್ಕರ್, ಪೆರಿಯಾರ್, ಲೋಹಿಯಾ, ಇಂತಹ ಕ್ರಾಂತಿಕಾರಿ ಸಮಾಜ ಸುಧಾರಕರ ಪೋಟೊಗಳನ್ನು ಗೋಡೆಗಳ ಮೇಲೆ ತೂಗು ಹಾಕಿದ್ದಾನೆ. ಜೊತೆಗೊಂದು 'ಗಾಂಧೀಜಿಯ' ಫೋಟೋ ಕೂಡ ಇದೆ. ಇದಕ್ಕೆ ವಿರುದ್ಧ ಎಂಬಂತೆ ಆತನ ಹೆಂಡತಿ ರಾಜಮ್ಮ ಮಹಾನ್ ದೈವಭಕ್ತೆ, ಪ್ರತಿದಿನ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾಳೆ. ಆಸ್ತಿಕತೆ ಮತ್ತು ನಾಸ್ತಿಕತೆ ಎರಡೂ ಕೂಡ ಇಲ್ಲಿಯೇ ಇದೆ. ಹಾಗೆಯೇ ದೇಶಪಾಂಡೆ ತನ್ನ ತಂದೆಯ ಸಾವಿನ ನಂತರ ತಿಥಿ ಕಾರ್ಯಗಳನ್ನು ಕೂಡ ಮಾಡಿಲ್ಲ ಎಂಬುದು ವಿಶೇಷ. ಇಲ್ಲಿ ಆತ ಹೇಳುವ ಮಾತನ್ನು ಗಮನಿಸಬೇಕು. "ತಿಥಿ ಅಂತ ಹೊಟ್ಟೆ ತುಂಬಿರೋರಿಗೆಲ್ಲ ಊಟ ಹಾಕೋದಕ್ಕಿಂತ ಅದೇ ದುಡ್ಡನ್ನು ಯಾವುದಾದರೂ ಅನಾಥಾಶ್ರಮಕ್ಕೆ ಕೊಡೋದು ಒಳ್ಳೆಯದು"[5] ಎಂದು ಹೇಳುತ್ತಾನೆ. ಎಲ್ಲಾ ಮೇಲು–ಕೀಳುಗಳನ್ನು ಮೀರಿ ನಿಲ್ಲುವ ರಾಜಮ್ಮಳ ಗಂಡನಲ್ಲಿ ಪಂಪ ಹೇಳುವ 'ಮಾನವ ಜಾತಿ ತಾನೊಂದೇ ವಲಂ' ಎಂಬ ಅಂಶವನ್ನು ಕಾಣಬಹುದು.

ಜಾತೀಯತೆಯನ್ನು ಮೀರಿ ನಿಲ್ಲುವ ಮತ್ತೊಂದು ವಿಭಾಗ 'ಅಂತರಂಗದ ಪುಟಗಳು' ರಾಣಿ ಎಂಬ ದಲಿತ ಹೆಣ್ಣು ಮಗಳೊಬ್ಬಳು 'ಆಶಾ' ಪತ್ರಿಕೆಗೆ ಬರೆದು ಕೊಟ್ಟ ಲೇಖನದಲ್ಲಿ ಹೇಗೆ ಜಾತೀಯತೆಯನ್ನು ಮೀರಿ ಜೀವನವನ್ನು ಕಟ್ಟಿಕೊಂಡ ವಿಚಾರವನ್ನು ಕಾಣಬಹುದು. ಜಾತೀಯತೆಯನ್ನು ಮೀರಿ ಬೆಳೆದ ಹುಡುಗಿ ರಾಣಿ, ಅದೇ ಊರಿನ ಎಲ್ಲಾ ಜನರಿಗೂ ಸ್ಫೂರ್ತಿಯಾಗುತ್ತಾಳೆ.

'ಸ್ತ್ರೀಲೋಕ' ಕಾದಂಬರಿಯಲ್ಲಿ ಕಂಡುಬರುವ ಸಾಮಾಜಿಕ ಚಿತ್ರಣದಲ್ಲಿ ಮತ್ತೊಂದು ಪ್ರಮುಖ ಅಂಶ 'ಸಮಾನತೆ' ಸ್ತ್ರೀ ಪುರುಷರೆಲ್ಲರು ಸಮಾನರು ಎಂಬ ಆಧಾರದಲ್ಲಿ ಅನೇಕ ಪಾತ್ರಗಳು ಇಲ್ಲಿ ರಚನೆಯಾಗಿದೆ.

ಚಿಕ್ಕ ಮಗುವಿನಿಂದ ಹಿಡಿದು ಮನೆ ಕೆಲಸದ ಪಾರುವಾಗಲಿ, ಸರ್ಕಾರಿ ನೌಕರಿಯಲ್ಲಿರುವ ಕಮಲ, ಪ್ರಜ್ಞಾ ಸುನೀತ ಮುಂತಾದ ಪಾತ್ರಗಳಾಗಲಿ ಅನ್ಯಾಯವನ್ನು ಮೆಟ್ಟಿ ನಿಲ್ಲುವ ಲಕ್ಷಣಗಳನ್ನು ಇಲ್ಲಿ ಕಾಣಬಹುದು. 'ಪ್ರಳಯವಾದಾಗ' ಎಂಬ ಅಧ್ಯಾಯದಲ್ಲಿ ಶ್ವೇತಾ ಎಂಬ ಪುಟ್ಟ ಹುಡುಗಿ ತನ್ನ ತಂದೆಯ ವಿರುದ್ಧ ಆಡುವ ಮಾತುಗಳು ಗಮನಾರ್ಹವಾಗಿವೆ. ಆಕೆಯ ದೃಷ್ಟಿಯಲ್ಲಿ ತನ್ನ ತಂದೆ ಮತ್ತು ತಾಯಿ ಇಬ್ಬರು ಸಮಾನರು ಎಂಬುದು ವಿಶೇಷ. ಇದೇ ರೀತಿಯಲ್ಲಿ ಸಾಗುವ ಮತ್ತೊಂದು ಘಟಕ 'ನಾಟಕದ ಮಾಲ' ಇಲ್ಲಿ ಎರಡು ವಿಚಾರಗಳನ್ನು ಕಾಣಬಹುದು. ಮಹಿಳೆಯರ ನಿತ್ಯ ಕರ್ಮಕ್ಕೆ ಸಂಬಂಧಿಸಿದಂತೆ, ಅವರು ಅಂತಹ ಸಮಸ್ಯೆಗಳನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ವಿಶೇಷವಾಗಿ ಹೊರಗಡೆ ಬಂದ ಸಂದರ್ಭದಲ್ಲಿ ಅದು ಹೇಗೆ ಮುಜುಗರ ಉಂಟುಮಾಡುತ್ತದೆ ಎಂಬುದನ್ನು ಇಲ್ಲಿ ಪುಷ್ಪ ಹಾಗೂ ಮಾಲ ತಾವು ಪ್ರಯಾಣದ ಸಂದರ್ಭದಲ್ಲಿ ಎದುರಿಸಿದ ಸಂಕಟವನ್ನು, ಹಾಸ್ಯಸ್ವಾದವಾಗಿ ಚರ್ಚಿಸುವುದನ್ನು ಕಾಣಬಹುದು. ಹಾಗೆಯೇ ವೃತ್ತಿಯ ವಿಚಾರದಲ್ಲಿ ಸ್ತ್ರೀ ಪುರುಷರ ನಡುವೆ ಹೇಗೆ ಭಿನ್ನಾಭಿಪ್ರಾಯಗಳಿವೆ ಎಂಬುದನ್ನು ಇಲ್ಲಿ ಕಾಣಬಹುದು.

ಸಮಾನತೆಯ ದೃಷ್ಟಿಕೋನದಲ್ಲಿ ರಚನೆಯಾಗಿರುವ ಮತ್ತೊಂದು ಘಟಕ 'ವಿಜಿಯ ದ್ವಂದ್ವ' ಒಂದು ಹೆಣ್ಣು ಇಂದು ಎಲ್ಲಾ ರಂಗಗಳಲ್ಲಿಯೂ ಪುರುಷನಂತೆ ಸಮಾನವಾಗಿ ಕಾಣಿಸಿಕೊಳ್ಳಬಲ್ಲಳು ಎಂಬುದನ್ನು ಇಲ್ಲಿ ಕಾಣಬಹುದು. ವಿಜಿಯ ಮಗಳು 'ಹೇಮ'

ಪ್ರಾಯದ ಹುಡುಗಿ ತಮ್ಮ ಶಾಲೆಯ ವತಿಯಿಂದ ಜಿಲ್ಲಾ ಮಟ್ಟಕ್ಕೆ 'ಕೊಕ್ಕೊ' ಆಟದಲ್ಲಿ ಆಯ್ಕೆಯಾಗಿದ್ದಾಳೆ. ಇದು ಶಾಲೆಗೆ ಹೆಮ್ಮೆ ಪಡುವ ವಿಚಾರ ಎನಿಸಿದರೆ, ಆಕೆಯ ಪೋಷಕರಿಗೆ ಆತಂಕವನ್ನು ಸೃಷ್ಟಿ ಮಾಡಿದೆ.

ಕಾರಣ ಆಕೆ ಮೈಸೂರಿನವರೆಗೂ ಒಬ್ಬಳೇ ಹೋಗಿ ಆಟ ಆಡಬೇಕು ಎನ್ನುವುದಾಗಿದೆ. ಇಲ್ಲಿ ವಯಸ್ಸಿಗೆ ಬಂದ ಹೆಣ್ಣನ್ನು ಈ ಸಮಾಜ ಹೇಗೆ ನೋಡುತ್ತದೆ ಎಂಬ ಆತಂಕ ಆಕೆಯ ಪೋಷಕರಲ್ಲಿದೆ, ಪುರುಷನಂತೆ ಮಹಿಳೆಯೂ ಕೂಡ ಸಮಾನವಾಗಿ ಎಲ್ಲಾ ರಂಗದಲ್ಲಿಯೂ ಯಾವ ಆತಂಕವೂ ಇಲ್ಲದೆ ಪಾಲ್ಗೊಳ್ಳಬೇಕು ಎಂದು 'ಸುಮಾ' ವಿಜಿಯ ದ್ವಂದ್ವವನ್ನು ದೂರ ಮಾಡುತ್ತಾಳೆ.

ಒಂದು ಹೆಣ್ಣಿಗೆ ಒಬ್ಬ ಗಂಡು ತನ್ನಷ್ಟೆ ಸಮಾನತೆಯನ್ನು ನೀಡಿ, ಆಕೆಗೆ ಒಂದು ಬದುಕನ್ನು ಕಟ್ಟಿಕೊಟ್ಟ ಘಟನೆ ಅಂತರಂಗದ ಪುಟಗಳು ಎಂಬ ಘಟಕದಲ್ಲಿ ಕಂಡು ಬರುತ್ತಿದೆ. ತನ್ನ ಜೀವನ ಮುಗಿಯಿತು ಎಂದು ಯೋಚಿಸುತ್ತಿದ್ದ ದಮಯಂತಿಗೆ ಮತ್ತೊಂದು ಸುಂದರ ಬದುಕು ದೊರೆತಾಗ ಆಕೆಯಲ್ಲಿ ಜೀವಿಸುವ ಆಸೆ ಚಿಗುರೊಡೆಯುತ್ತದೆ. ಸವಿತಾ ನಾಗಭೂಷಣ ಅವರ 'ಸ್ತ್ರೀಲೋಕ' ಕಾದಂಬರಿಯಲ್ಲಿ ಹೆಣ್ಣು ಸಂಕಟ ಪಡುವ ಕಳೆದು ಹೋದ ಜೀವನವನ್ನು ಕಟ್ಟಿಕೊಳ್ಳಲು ಪ್ರಾಮಾಣಿಕವಾಗಿ ಹೋರಾಡುವ ಘಟನೆಗಳನ್ನು ಸಾಮಾನ್ಯವಾಗಿ ಕಾಣಬಹುದು. ಒಂದು ಗಂಡಿನಂತೆ ತಾನೂ ಕೂಡ ಸಮಾನವಾಗಿ ಜೀವಿಸಬೇಕು ಎಂದು ಹಾತೊರೆಯುವ ಪಾತ್ರಗಳು ಇಲ್ಲಿ ಉಂಟು.

ಸಮಾಜ ಕುಟುಂಬ, ರಕ್ತ ಸಂಬಂಧದ ತಿರಸ್ಕಾರಗಳು ಆಕೆಯಲ್ಲಿ ಬೇಸರ ತರಿಸಿದರೂ ಸಹ 'ಆಶಾ' ಪತ್ರಿಕೆಯ ಶಿಬಿರಗಳು ಹಾಗೂ ಆ ಊರಿನಲ್ಲಿ ಸ್ಥಾಪನೆಯಾದ 'ವನಿತಾ ಸಮಾಜ' ಅವಳಿಗೆ ಹೊಸ ಜೀವನವನ್ನು ಕಟ್ಟಿಕೊಡುತ್ತವೆ. ಅನಾಥಾಶ್ರಮದಲ್ಲಿ ಬೋಧನೆ ಮಾಡಿ ಅಲ್ಲಿಯೇ ಕೆಲಸ ಮಾಡಿಕೊಂಡು ಜೀವನ ಸಾಗಿಸಲು ನಿರ್ಧರಿಸುತ್ತಾಳೆ. ವಿಧವೆಯಾಗಿ ದಾರಿ ತಪ್ಪುವ ಎಷ್ಟೋ ಹೆಣ್ಣುಗಳ ನಡುವೆ 'ವೇದಾವತಿಯ' ಸನ್ನಡತೆ ಹಾಗೂ ಬದುಕುವ ಛಲ ಮೆಚ್ಚುವಂತಹದ್ದು.

ಕಾದಂಬರಿಯ ಪ್ರಾರಂಭದಲ್ಲಿಯೇ 'ಬೆಳ್ಳಿ' ಎಂಬ ಮನೆ ಕೆಲಸದ ಹೆಂಗಸು ಈ ಸಮಾಜದ ಅಸಮಾನತೆ ಹಾಗೂ ಕೆಲವು ಹೇಯ ಕೃತ್ಯಗಳಿಗೆ ಹೆದರಿ ತಾನು ವಿವಾಹವಾಗಿಲ್ಲದಿದ್ದರೂ ವಿಧವೆಯಂತೆ ಬಿಳಿ ಸೀರೆಯುಟ್ಟು ಜೀವಿಸುವ ರೀತಿ ಆಕೆಯ ಮನಸ್ಸಿನಲ್ಲಿ ಇರುವ ಈ ಸಮಾಜದ ಧೋರಣೆಯನ್ನು ತಿಳಿಸುತ್ತದೆ ಒಂಟಿ ಹೆಣ್ಣು ಒಬ್ಬಂಟಿಯಾಗಿ ಜೀವಿಸುವುದು ಎಷ್ಟು ಕಷ್ಟ ಎಂದು ಆಕೆಯ ಮಾತುಗಳಲ್ಲಿಯೇ ತಿಳಿಯುತ್ತದೆ. ಇಲ್ಲಿ ಮದುವೆ ಆಕೆಯ ಒಂಟಿತನಕ್ಕೆ ಉತ್ತರವಾಗಬಹುದಿತ್ತೇನೋ ಆದರೆ ಮದುವೆಯ ನಂತರದಲ್ಲಿ ಕೂಡ ಪುರುಷರಿಂದ ದಬ್ಬಾಳಿಕೆಗೆ ಒಳಗಾಗುವ ಹೆಣ್ಣು ಆಕೆಯ ಮನಸ್ಸಿನಲ್ಲಿ ನೆಲೆಸಿದ್ದಾಳೆ. ಇದೇ 'ಬೆಳ್ಳಿ' ಒಂಟಿಯಾಗಿ ವಿಧವೆಯಂತೆ ಜೀವನ ಸಾಗಿಸಲು ಕಾರಣ ಎನಿಸುತ್ತದೆ.

ಪ್ರಜ್ಞಾ ಮತ್ತು ಸುನೀತ ಇಲ್ಲಿ ಅಕ್ಷರಸ್ಥರು ವಿಚಾರದ ಕುರಿತು ಪೊಲೀಸ್ ಸ್ಟೇಷನ್‌ನಲ್ಲಿ ದೂರು ದಾಖಲು ಮಾಡಬೇಕು ಎಂದರೂ ಆ ಹುಡುಗಿಯರು ಒಪ್ಪುವುದಿಲ್ಲ ಕಾರಣ, ಮನೆಯವರ ಭಯ ಇದರಿಂದ ಆ ಹುಡುಗಿಯರ ಶೈಕ್ಷಣಿಕ ಜೀವನ ಅಂತ್ಯಗೊಂಡತೆಯೇ ಸರಿ. ಆದರೆ ಪ್ರಜ್ಞಾಳ ಮುಂದಿರುವ ಪ್ರಶ್ನೆ ಇಂತಹ ಹೇಯ ಕೃತ್ಯಗಳನ್ನು ಕೊನೆಯಾಗಬೇಕು ಎಂಬುದಾಗಿದೆ. ಅದಕ್ಕೆ ಅವಳು ಕಂಡುಕೊಳ್ಳುವ ಮಾರ್ಗ ಪತ್ರಿಕೆಯಲ್ಲಿ ಅದನ್ನು ಕುರಿತು ಬರೆಯಬೇಕು ಎಂಬುದು ಈ ಮೂಲಕ ಮಹಿಳೆಯರಿಗೆ ಎದುರಾಗುವ ಅನ್ಯಾಯಗಳನ್ನು ಬರವಣಿಗೆಯ ಮೂಲಕ ಸರಿಪಡಿಸಿಕೊಳ್ಳಲು ಯೋಚಿಸುವ ರೀತಿ ಸ್ತ್ರೀ ನಿಷ್ಠ ಸಿದ್ಧಾಂತದ ಭಾಗವಾಗಿ ಕಂಡುಬರುತ್ತದೆ.

ಪುರುಷ ಪ್ರಧಾನ ಸಮಾಜದ ಕರಾಳ ಮುಖವನ್ನು ಪರಿಚಯಿಸುವ 'ದಾರಿ ಕಾಣದಾಗಿದೆ' ಎಂಬ ವಿಭಾಗ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ

ಮುಖ್ಯವಾಗಿ ಕಂಡು ಬರುವ ಅತ್ಯಾಚಾರ, ಲೈಂಗಿಕತೆ, ದಬ್ಬಾಳಿಕೆಯ ಬಗ್ಗೆ ತಿಳಿಸುತ್ತದೆ. ಗಂಡನಿಂದ ಅಂಟು ರೋಗಕ್ಕೆ ತುತ್ತಾದ 'ಕುಮಾರಿ' ಅದರ ಪರಿಣಾಮವನ್ನು ಅನುಭವಿಸುತ್ತಿದ್ದಾಳೆ. ಅವಳಿಗೆ ಬಂದಿರುವ ಕಾಯಿಲೆಗಿಂತ ಅವಳು ಕಾಯಿಲೆಗೆ ತುತ್ತಾದ ರೀತಿ ಅವಳಲ್ಲಿ ಹೆಚ್ಚು ಭಯ ಹುಟ್ಟಿಸಿದೆ. ತನ್ನ ಗಂಡನ ಬಗ್ಗೆ ತಿರಸ್ಕಾರ, ಕೋಪ, ಭಯ ಎಲ್ಲವೂ ಒಟ್ಟಿಗೆ ಆಗಿದೆ. ಮತ್ತೆಂದಿಗೂ ತನ್ನ ಗಂಡನ ಮನೆಗೆ ಹೋಗುವುದಿಲ್ಲ ಎಂದು ನಿರ್ಧರಿಸಿದ್ದಾಳೆ. ಗಂಡನ ನಡವಳಿಕೆ ಪರಿಣಾಮವಾಗಿ ಅವಳು ಇಂದು ಹೆಚ್‌ಐವಿ ಇಂದ ಬಳಲುತ್ತಿದ್ದಾಳೆ. ಈ ಕೆಟ್ಟ ಮನಸ್ಥಿತಿಯ ವ್ಯಕ್ತಿಗಳ ಎದುರು ಹೆಣ್ಣಿನ ಅಸಹಾಯಕ ಸ್ಥಿತಿ ಅವಳನ್ನು ಮೂಕವೇದನೆಗೆ ಈಡು ಮಾಡಿದೆ.

ಈ ವ್ಯವಸ್ಥೆಯ ಸುಳಿಗೆ ಸಿಲುಕಿ ಹಾಳಾದ ಜೀವನವನ್ನು ಮತ್ತೆ ಸರಿಪಡಿಸಿಕೊಂಡ ಘಟನೆ 'ಅಂತರಂಗದ ಪುಟಗಳು–01' ಎಂಬ ಭಾಗದಲ್ಲಿ ಕಂಡುಬರುತ್ತದೆ. ವಿಮಲಳ ಸಲಿಗೆಯನ್ನು ಉಪಯೋಗಿಸಿಕೊಂಡ ಆಕೆಯ ಸಹೋದ್ಯೋಗಿ ಅದೆಷ್ಟೋ ಹೆಣ್ಣು ಮಕ್ಕಳಿಗೆ ಮೋಸ ಮಾಡಿದ್ದಾನೆ. ಆತನ ದೃಷ್ಟಿಯಲ್ಲಿ ಹೆಣ್ಣೆಂದರೆ ಕೇವಲ ಭೋಗದ ವಸ್ತು. ಇಂತಹ ವ್ಯಕ್ತಿತ್ವಗಳು ಈ ವ್ಯವಸ್ಥೆಯ ಕರಾಳ ಮುಖವನ್ನು ಪರಿಚಯಿಸುತ್ತವೆ.

ಶ್ರೀಮಂತರ ಮನೆಯಲ್ಲಿ ಬೆಳೆದ 'ರೇಖಾರಾವ್' ಒಬ್ಬ ರಾಜಕಾರಣಿ ಹಾಗೂ ಅನುಕೂಲಸ್ಥರ ಮನೆಗೆ ಮದುವೆ ಆಗುತ್ತಾಳೆ. ಆದರೆ ಆಕೆಯ ಗಂಡನ ವ್ಯಕ್ತಿತ್ವ ಹದಗೆಟ್ಟಿದೆ. ಈ ವಿಚಾರವನ್ನು ಆಕೆ ತನ್ನ ತವರು ಮನೆಯವರಿಗೆ ತಿಳಿಸಿದರೂ ಕೂಡ ಅವರು ಕೊಡುವ ಉತ್ತರ ಹೊಂದಿಕೊಂಡು ಹೋಗು ಎಂಬುದು. ಆದರೆ ಮುಗ್ಧ ಸ್ವಭಾವದ ಸಂಪ್ರದಾಯ ಕುಟುಂಬದಿಂದ ಬಂದಂತಹ ರೇಖಾರಾವ್‌ಗೆ ತನ್ನ ಗಂಡನ ವ್ಯಕ್ತಿತ್ವ ಆತನ ನಡವಳಿಕೆ, ಇತರೆ ಮಹಿಳೆಯರ ಜೊತೆಗಿನ ಆತನ ಚೆಲ್ಲಾಟ ಅವಳಿಗೆ ಬೇಸರ ಮತ್ತು ನಾಚಿಕೆ ತರಿಸಿದೆ. ಇದರಿಂದ ವಿಚ್ಛೇದನದ ಮೊರೆ ಹೋಗುವ ಆಕೆಗೆ ಅದು ದೊರೆಯುತ್ತಿಲ್ಲ. ಕಾರಣ ಆತನ ಪ್ರತಿಷ್ಠೆಗೆ ದಕ್ಕೆ ಬರುತ್ತದೆ ಎಂಬುದು ತನ್ನ ಮಗುವನ್ನು ಆಕೆಯಿಂದ ದೂರ ಮಾಡಿ ರೇಖಾರಾವ್ ಮೇಲೆಯೇ ಅಪಪ್ರಚಾರ ಮಾಡುತ್ತಾನೆ.

ಒಳ್ಳೆಯ ದಿನಗಳನ್ನು ಎದುರುನೋಡುತ್ತಿರುವ ರೇಖಾರಾವ್ ಅವುಗಳ ನಿರೀಕ್ಷೆಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಹಾಗೂ ಕೆಲವು ಕೆಟ್ಟ ಗಂಡಸರಿಂದ ಮುಗ್ಧ ಹೆಣ್ಣು ಮಕ್ಕಳಿಗೆ ಎದುರಾಗುವ ತೊಂದರೆಗಳಿಗೆ, ಮಾನಸಿಕ ಹಿಂಸೆಗಳಿಗೆ, ಉತ್ತರವನ್ನು ಹುಡುಕುತ್ತಿದ್ದಾಳೆ. ಹೀಗೆ ಪುರುಷ ಪ್ರಧಾನ ವ್ಯವಸ್ಥೆಯ ಘೋರ ಮುಖಗಳು ಅನಂತ ಅವುಗಳನ್ನು ಹೋಗಲಾಡಿಸುವ ಸಲುವಾಗಿ ಸ್ತ್ರೀಯರು ಬರವಣಿಗೆಯ ಹೋರಾಟಕ್ಕೆ ಇಳಿಯಬೇಕಾಗಿರುತ್ತದೆ. ಹೆಚ್ಚು ಹೆಚ್ಚು ಶಿಕ್ಷಿತರಾಗಿ ವಿಚಾರವಂತರಾಗಿ ಬದುಕಬೇಕಾಗುತ್ತದೆ.

ಸವಿತಾ ನಾಗಭೂಷಣ ಅವರ ಸ್ತ್ರೀ ಲೋಕ ಕಾದಂಬರಿಯಲ್ಲಿ ಕಂಡು ಬರುವ ಮತ್ತೊಂದು ಪ್ರಮುಖವಾದ ಅಂಶ ಅಂತರ್ಜಾತಿ ವಿವಾಹ, ಜಾತೀಯತೆಗೆ ಕಟ್ಟು ಬೀಳದ ಅವರು ಸ್ವತಃ ತಮ್ಮ ಬದುಕಿನಲ್ಲಿ ಅಂತರ್ಜಾತಿವಿವಾಹಕ್ಕೆ ಮುಂದಾದವರು. ತಮ್ಮ ಕೃತಿಗಳಲ್ಲಿ ಕೂಡ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿರುವುದನ್ನು ಕಾಣಬಹುದು. ಅಂಬೇಡ್ಕರ್, ಲೋಹಿಯ, ಗಾಂಧೀಜಿ, ಕುವೆಂಪು, ಸ್ವಾಮಿ ವಿವೇಕಾನಂದ ಇಂತಹ ಮಹಾನ್ ವ್ಯಕ್ತಿಗಳಿಂದ ಪ್ರೇರಣೆಗೊಂಡ ಅವರು ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡುವ ಕೃತಿಗಳನ್ನು ರಚಿಸಿದ್ದಾರೆ. ಸ್ತ್ರೀ ಲೋಕದ 'ನದಿ ನಡೆದಂತೆ' ಎಂಬ ವಿಭಾಗದಲ್ಲಿ ಅಂತರ್ಜಾತಿ ವಿವಾಹದ ವಸ್ತುವನ್ನು ಕಾಣಬಹುದು. ಒಂದರ್ಥದಲ್ಲಿ 'ನಿಂತ ನೀರು ಕೊಳೆಯುತ್ತದೆ ನಾರುತ್ತದೆ ಆದರೆ, ಹರಿಯುವ ನದಿ ಹರಿಯುತ್ತಾ ಸಾಗುತ್ತದೆ' ಈ ಮಾತಿನ ಆಧಾರದಲ್ಲಿ ಈ ಭಾಗದ ಕಥಾವಸ್ತು ಇದೆ.

ಹಾಗೆಯೇ ಸ್ತ್ರೀಲೋಕದಲ್ಲಿ ಗಮನಿಸಬಹುದಾದ ಮತ್ತೊಂದು ವಿಚಾರ 'ವರದಕ್ಷಿಣೆ' ಅನಾದಿ

ಕಾಲದಿಂದ ಸಾಮಾಜಿಕ ಪಿಡುಗಾಗಿರುವ ವರದಕ್ಷಿಣೆ ಇಂದಿಗೂ ಸ್ವಲ್ಪ ಮಟ್ಟದಲ್ಲಿ ಜೀವಂತವಾಗಿದೆ. ಎಂದರೆ ತಪ್ಪಾಗುವುದಿಲ್ಲ. ವರದಕ್ಷಿಣೆಯಿಂದ ಅದೆಷ್ಟೊ ಹೆಣ್ಣು ಮಕ್ಕಳ ಜೀವನ ಬೀದಿಗೆ ಬಂದಿರುವುದುಂಟು ಹಾಗೂ ಹೆಣ್ಣು ಹೆತ್ತ ತಂದೆ ತಾಯಿಗಳು ಕಣ್ಣೀರು ಸುರಿಸಿರುವುದು ಉಂಟು ಈ ಅಂಶಗಳನ್ನು ಕೂಡ ಲೇಖಕರು ತಮ್ಮ ಕಾದಂಬರಿಯಲ್ಲಿ ತಂದಿದ್ದಾರೆ.

ಈ ಕಾದಾಂಬರಿಯಲ್ಲಿ ಗುರುತಿಸಬಹುದಾದ ಮತ್ತೊಂದು ಅಂಶ. ವೇಶ್ಯಾವಾಟಿಕೆ, ಬಡತನದಿಂದಲೋ ಅನಿವಾರ್ಯತೆಯಿಂದಲೋ, ಕಸುಬಿನಿಂದಲೋ ಬಲವಂತದಿಂದಲೋ, ವೇಶ್ಯಾವಾಟಿಕೆಯಲ್ಲಿ ಇಳಿಯುವ ಹೆಣ್ಣು ಸಮಾಜದ ದೃಷ್ಟಿಕೋನದಲ್ಲಿ ತಿರಸ್ಕಾರಕ್ಕೆ ಒಳಗಾಗುತ್ತಾಳೆ. ಹಾಗೂ ಅವಮಾನಕ್ಕೆ ಗುರಿಯಾಗುತ್ತಾಳೆ. ಈ ಮಾತನ್ನು ಗಮನಿಸಬಹುದು. ಸಮಾಜದಲ್ಲಿ ಸೂಳೆಯರಿದ್ದಾರೆ. ಕೆಲವರು ಅತಿಕಾಮದಿಂದ ಸೂಳೆಯರಾಗಿದ್ದರೆ, ಬಹುಮಂದಿ ಹೊಟ್ಟೆಯ ಪಾಡಿಗಾಗಿ ಅಥವಾ ಗಂಡಸಿನ ಶೋಷಣೆಯಿಂದ ಸೂಳೆಯರಾಗಿದ್ದಾರೆ. ಮೇಲಿನ ಮಾತಿಗೆ ನಿದರ್ಶನವಾಗಿ ಇಲ್ಲಿ ಎರಡು ರೀತಿಯ ವೇಷ್ಯಾವಾಟಿಕೆಯನ್ನು ಗಮನಿಸಬಹುದು. 'ಲಚ್ಮಿ ಪುರಾಣ' ಎಂಬ ಘಟಕದಲ್ಲಿ 'ಲಚ್ಮಿ' ಎಂಬ ಹೆಣ್ಣು ಚಿಕ್ಕ ಮಗುವನ್ನು ಕಟ್ಟಿಕೊಂಡು ಕಷ್ಟಪಟ್ಟು ದುಡಿದು ಜೀವನ ಸಾಗಿಸುವ ಚಿತ್ರಣವಿದೆ. ಆಕೆಯ ಗಂಡ ಲಚ್ಮಿಯಿಂದ ದೂರವಾಗಿದ್ದಾನೆ. ಆದರೂ ಸಹ ಆಕೆ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾಳೆ. ಆದರೆ ಆಕೆಯ ಜೊತೆಯಲ್ಲಿ ಕೆಲಸ ಮಾಡುವ ಮತ್ತಿಬ್ಬರು ಹೆಂಗಸರು ಶೋಕಿ ಮಾಡಿಕೊಂಡು ಕೆಟ್ಟ ಕೆಲಸಕ್ಕೆ ಇಳೀದು ಮೈ ಮಾರಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಅದು ಲಚ್ಮಿಗೆ ದೇವರು ಮೆಚ್ಚುವ ಕೆಲಸ ಅಲ್ಲ. ಆಕೆ ಹೇಳುವ ಮಾತು ಒಂದು ಹೆಣ್ಣು ಹೇಗಾದರೂ ಜೀವನ ನಡೆಸಬಹುದು ಆದರೆ ನಾಲ್ಕು ಜನ ಮೆಚ್ಚುವಂತೆ ಬದುಕುವುದು ಒಳ್ಳೆಯದು ಎಂಬುದು. ಲಚ್ಚಿಯ ನಿರ್ಧಾರ. ಬೇರೆ ಬೇರೆ ಮನಸ್ಥಿತಿಗಳು ಇಲ್ಲಿ ಎದುರಾಗುತ್ತವೆ. ಜೀವನ ನಡೆಸುವುದಕ್ಕೆ ಆ ಮೂರು ಜನ ಹೆಂಗಸರು ಆಯ್ಕೆ ಮಾಡಿಕೊಂಡ ದಾರಿ ಬೇರೆ ಬೇರೆ ಒಂದು ಧರ್ಮದ್ದು, ಮತ್ತೊಂದು ಅಧರ್ಮದ್ದು.

ಇದೇ ದಾರಿಯಲ್ಲಿ ಸಾಗುವ ಮತ್ತೊಂದು ಘಟಕ 'ಅಂತರಂಗದ ಪುಟಗಳು–08' ಯಮುನಾ ಎಂಬ ಮಹಿಳೆ ತಾನು ಮೈಸೂರಿನಲ್ಲಿ ಕುವೆಂಪು ನಗರದಲ್ಲಿ ವಾಸವಾಗಿದ್ದು ಆ ಮನೆಗೆ ಬಾಡಿಗೆ ಕೇಳಿಕೊಂಡು ಬರುವ 3 ಜನ ಹೆಂಗಸರ ಬಗ್ಗೆ ಪ್ರಾರಂಭದಲ್ಲಿ ಯಾವ ವಿಚಾರವು ಅರ್ಥವಾಗುವುದಿಲ್ಲ. ಆದರೆ ಕ್ರಮೇಣ ದಾರಿಯಲ್ಲಿ ಆ 3 ಜನ ಹೆಂಗಸರಲ್ಲಿ ತನ್ನದೇ ವಯಸ್ಸಿನ ಒಂದು ಹುಡುಗಿಯನ್ನು ಕಂಡಾಗ, ಆಕೆಯ ಮಾತುಗಳನ್ನು ಕೇಳಿ ಅದು ವೇಶ್ಯಾವಾಟಿಕೆಯ ಜಾಲ ಎಂದು ಅರ್ಥವಾಗುತ್ತದೆ. ಇಂತಹ ಶೋಷಣೆಗಳಿಗೆ ಕೊನೆ ಯಾವಾಗ ಎಂದು ಯೋಚಿಸುತ್ತಾ ಅವಳ ಕಣ್ಣುಗಳಲ್ಲಿ ನೀರು ಬರುತ್ತದೆ. ವೇಶ್ಯಾವಾಟಿಕೆಯನ್ನು ವ್ಯವಹಾರ ಮಾಡಿಕೊಂಡ ಇಂತಹ ನೀಚ ಕೃತ್ಯಗಳು ಅದೆಷ್ಟೊ ಹೆಣ್ಣು ಮಕ್ಕಳ ಜೀವನವನ್ನು ಹಾಳು ಮಾಡುತ್ತಿವೆ.

ದೇವದಾಸಿ ಪದ್ಧತಿಯ ಕರಾಳ ಮುಖದ ಪರಿಚಯ ಇಲ್ಲಿನ ಮತ್ತೊಂದು ವಸ್ತುವಾಗಿದೆ. ಇಲ್ಲಿ ವಸ್ತುವಿನಿಂದ ವಸ್ತುಗೆ ಭಿನ್ನತೆ ಕಾಣುತ್ತದೆ. ಇಲ್ಲಿ ಪ್ರತಿಯೊಂದು ಪಾತ್ರಗಳು ಸಾಮಾಜಿಕ ಚಿಂತನೆಯೊಂದಿಗೆ ಓದುಗರಲ್ಲಿ ಪ್ರಶ್ನೆಯನ್ನು ಮೂಡಿಸುತ್ತದೆ. ಆನಂದ ಅವರ 'ನಾನು ಕೊಂದ ಹುಡುಗಿ' ಕತೆಯಲ್ಲಿ ದೇವದಾಸಿ ಪದ್ಧತಿಗೆ ಸಿಲುಕಿದ ಒಂದು ಹುಡುಗಿಯನ್ನು ನಿರೂಪಕಿ ತಮ್ಮ ಮಾತುಗಳ ಮೂಲಕ ಅವಳ ಪದ್ಧತಿಯನ್ನು ಅವಳಿಗೆ ಅರಿವು ಮಾಡಿಸುತ್ತಾರೆ. ಕೆಲವು ಪದ್ಧತಿಗಳಿಗೆ ಜನ ಹೇಗೆ ಹೊಂದಿಕೊಂಡಿದ್ದಾರೆ ಎಂದರೆ ದೇವದಾಸಿ ಪದ್ಧತಿಯ ಶಿವಮ್ಮ ಪ್ರತ್ಯಕ್ಷ ನಿದರ್ಶನವಾಗಿ ಕಾಣಿಸುತ್ತಾಳೆ. ಶಿವಮ್ಮ ಈ ಪದ್ಧತಿಯನ್ನು ಸಂತೋಷವಾಗಿಯೇ ಸ್ವೀಕರಿಸಿದ್ದಾಳೆ. ಅದನ್ನು ಸಂತೋಷದಿಂದ ಅನುಭವಿಸುತ್ತಿದ್ದಾಳೆ. ಅದು ಕೆಟ್ಟ ಪದ್ಧತಿ ಎಂದು ಎಂದಿಗೂ ಅವಳ ಅರಿವಿಗೆ ಬಂದಿಲ್ಲ.

ಈ ಎಲ್ಲಾ ಪದ್ಧತಿಗಳಲ್ಲಿ ಕಾಣುವುದು ಕೇವಲ ಸ್ತ್ರೀಯರು ಮಾತ್ರ ಇಂತಹ ಆಚರಣೆಗಳು ಮಾನಸಿಕ ದೌರ್ಬಲ್ಯಗಳಾಗಿ ಕಾಣಿಸುತ್ತವೆ. ಇಂತಹ ಅನಗತ್ಯ ಆಚರಣೆಗಳಿಗೆ ಹೆಚ್ಚು ಬಲಿಯಾಗುತ್ತಿರುವುದು ಹೆಣ್ಣು ಮಕ್ಕಳೇ ಆದ್ದರಿಂದ ಇವುಗಳನ್ನು ತಡೆಯುವ ಸಲುವಾಗಿ ಅನೇಕ ಬರಹಗಳು ಬಂದಿರುವುದನ್ನು ಕಾಣಬಹುದು. ಇಂತಹ ಅನಿಷ್ಟ ಪದ್ಧತಿಗಳಿಗೆ ಮಹಿಳೆಯರು ಮಾರು ಹೋಗದಂತೆ ತಡೆಯುವುದು ಮಹಿಳೆಯರಲ್ಲಿ ಪ್ರಜ್ಞಾವಂತಿಕೆಯನ್ನು ಬೆಳೆಸುವುದು ಸ್ತ್ರೀ ನಿಷ್ಠ ಚಳುವಳೀಯ ಮುಖ್ಯ ಉದ್ದೇಶ ಎಂಬುದನ್ನು ನಿರೂಪಕಿ ವ್ಯಕ್ತಪಡಿಸುತ್ತಾರೆ. ಸ್ತ್ರೀಲೋಕ ಕಾದಂಬರಿಯ ಮತ್ತೊಂದು ಪ್ರಮುಖ ಅಂಶ ಎಂದರೆ 'ಸಾಮಾಜಿಕ ಬದಲಾವಣೆ' ಮಹಿಳೆಯರನ್ನು ಕೆಳಮಟ್ಟದಲ್ಲಿ ಕಾಣುವ ಪ್ರತಿಯೊಂದರ ಬದಲಾವಣೆ ಅಗತ್ಯ ಎಂಬ ವಿಚಾರಗಳನ್ನು ಕವಯಿತ್ರಿ ಇಲ್ಲಿ ಹೇಳಿದ್ದಾರೆ. 'ಹಾಡಿನ ಹಬ್ಬ' ಎಂಬ ವಿಭಾಗದಲ್ಲಿ ಅಂತಹದ್ದೊಂದು ಬದಲಾವಣೆಯ ಮುನ್ಸೂಚನೆಯನ್ನು ಕಾಣಬಹುದು. 'ಹಾಡಿನ ಹಬ್ಬ' ಹೆಸರೇ ಸೂಚಿಸುವಂತೆ ಒಂದು ಔತಣ ಕೂಟದಲ್ಲಿ ನಡೆಯುವ ಸಂಗತಿಗಳಾಗಿವೆ.

ಹೆಣ್ಣು ಕೇವಲ ಮಕ್ಕಳನ್ನು ಹೆರುವುದಕ್ಕೆ ಹಾಗೂ ಗಂಡ ಮತ್ತು ಅತ್ತೆ ಮನೆಯವರ ಸೇವೆ ಮಾಡುವುದಕ್ಕೆ ಎಂಬ ಚಿಂತನೆ ಹಿಂದೆ ಹಲವರಲ್ಲಿ ಇತ್ತು. ಆದರೆ ಅದನ್ನು ಮೀರಿ ಹೆಣ್ಣು ಎಲ್ಲದಕ್ಕೂ ಸಿದ್ದ ಎಂಬ ಅಂಶವನ್ನು ನಿರೂಪಕಿ ಹೇಳಿದ್ದಾರೆ.

ಅಷ್ಟೇ ಅಲ್ಲದೇ ಎಲ್ಲಾ ಮಹಿಳೆಯರು ಒಂದೆಡೆ ಒಟ್ಟಾಗಿ ಸೇರಿ ಯೋಗಕ್ಷೇಮಗಳನ್ನು ವಿಚಾರಿಸುವ ಹಲವು ವಿಚಾರಗಳ ಬಗ್ಗೆ ಚರ್ಚಿಸುವ ರೀತಿ ವಿಶೇಷವಾಗಿದೆ. ಇಲ್ಲಿ ಯಾವುದೇ ಜಾತಿಭೇದಕ್ಕೆ ಅವಕಾಶ ಇಲ್ಲ. ಎಲ್ಲಾ ವರ್ಗದ ಮಹಿಳೆಯರು ಅಲ್ಲಿ ಇದ್ದಾರೆ. ಕೆಳವರ್ಗದ 'ಹನುಮಿ' ಜಾನಪದ ಗೀತೆ ಹಾಡುವುದು ಆ ವರ್ಗದ ಬದಲಾವಣೆಯನ್ನು ಸೂಚಿಸುತ್ತದೆ.

ಬದಲಾವಣೆಯ ಹಾದಿಯಲ್ಲಿ ಸಾಗುವ ಮತ್ತೊಂದು ಘಟಕ 'ಪಾರುವಿನ ಫೆಂಡು' ಮನುಷ್ಯ ತಪ್ಪು ಮಾಡುವುದು ಸಹಜ. ಆದರೆ ಅದನ್ನು ಅರಿತು ಬದಲಾಗಬೇಕು ಎಂಬುದು ಇಲ್ಲಿನ ಆಶಯ. ಹೊಟ್ಟೆಪಾಡು ಅಥವಾ ಕೆಟ್ಟ ಪರಿಸ್ಥಿತಿ ಕಾರಣಯಾವುದೇ ಇರಲಿ ತಪ್ಪು ಅರಿವಿಗೆ ಬಂದಾಗ ಅದನ್ನು ಮನವರಿಕೆ ಮಾಡಿಕೊಂಡು ಬದಲಾಗಬೇಕಾಗಿದ್ದು, ಮನುಷ್ಯನ ಸಹಜ ತಿಳುವಳಿಕೆ, ಇಂತಹ ಮನೋಧರ್ಮವುಳ್ಳ ಪಾತ್ರ ಭದ್ರ.

ಭದ್ರ ದಿಕ್ಕಿಲ್ಲದ ಅನಾಥ ಹೆಂಗಸು ತರೀಕೆರೆಯಲ್ಲಿ ಹೊಟ್ಟೆಪಾಡಿಗಾಗಿ ಪಿಕ್ ಪ್ಯಾಕೇಟ್ ಮಾಡಿ ಜೀವನ ನಡೆಸುತ್ತಿದ್ದ ಹೆಂಗಸು. ಭದ್ರಳ ಮನಸ್ಸನ್ನು ಪ್ರಜ್ಞಾ ಮತ್ತು ನಿರೂಪಕಿ (ಸುಮ) ಅರ್ಥ ಮಾಡಿಕೊಂಡು, 'ಕಮಲಾಳ' ಮನೆಯಲ್ಲಿ ಕೆಲಸ ಕೊಡಿಸುವ ಭರವಸೆ ನೀಡುತ್ತಾರೆ. ಜೀವನದ ಜಂಜಾಟಕ್ಕೆ ಸೋತು ಬದುಕು ಕಟ್ಟಿಕೊಳ್ಳಲು ಹರಸಾಹಸಪಡುವ ಪಾತ್ರಗಳು, ಪ್ರಾಮಾಣಿಕವಾಗಿ ಜೀವನ ನಡೆಸಬೇಕು ಎಂದು ಯೋಚಿಸುವ ರೀತಿ ಮೆಚ್ಚುವಂತಹದ್ದು.

ಮಹಿಳೆಯರು ಕೇವಲ ತಮ್ಮ ತಮ್ಮ ಜೀವನ ವಿಚಾರದಲ್ಲಿ ಮಾತ್ರ ಬದಲಾವಣೆಯನ್ನು ಬಯಸುವುದಿಲ್ಲ. ಸಾಮಾಜಿಕ ಬದಲಾವಣೆಯಲ್ಲಿಯೂ ಮನಸ್ಸು ಮಾಡುತ್ತಾರೆ ಎಂಬ ಅಂಶವನ್ನು ನಿರೂಪಕಿ 'ಖಾಲಿ ಕೊಡಗಳ ನಡುವೆ' ಎಂಬ ವಿಭಾಗದಲ್ಲಿ ಚರ್ಚಿಸಿದ್ದಾರೆ.

ಮಹಿಳೆಯರೆಲ್ಲರು ಒಂದೆಡೆ ಒಟ್ಟಾಗಿ ಸೇರಿ ನೀರಿನ ವ್ಯವಸ್ಥೆಯನ್ನು ಹೇಗೆ ಸುಧಾರಿಸಬಹುದು ಎಂಬುದರ ಬಗ್ಗೆ ಚಿಂತಿಸುತ್ತಿದ್ದಾರೆ. ಆ ಗ್ರಾಮದ ಕೆರೆಯನ್ನು ಸರಿಪಡಿಸುವ ಯೋಚನೆ ಮಾಡುತ್ತಿದ್ದಾರೆ. ಕೆರೆಯಲ್ಲಿ ತುಂಬಿರುವ ಹೂಳನ್ನು ತಾವೇ ಸೇರಿ ತೆಗೆಯಬೇಕು. ಅದನ್ನು ನೀರಿನ ಮೂಲವಾಗಿ ಮಾರ್ಪಡಿಸಬೇಕು ಎಂದು ಚರ್ಚಿಸುವ ರೀತಿ ಸ್ವಾಗತಾರ್ಹ. ಒಂದು ಸಮಸ್ಯೆಯನ್ನು ನಿವಾರಿಸಲು ಒಗ್ಗಟ್ಟು ಎಷ್ಟು ಮುಖ್ಯ ಎಂಬುದನ್ನು ಇಲ್ಲಿ

ಕಾಣಬಹುದು. ಹಾಗಾಗಿ ಚರ್ಚಿಸುವುದು ಕೂಡ ಅಗತ್ಯ ಎಂಬ ಅಂಶವನ್ನು ನಿರೂಪಕಿ ತಿಳಿಸಿದ್ದಾರೆ.

ನೀರಿನ ಸಮಸ್ಯೆ ಎದುರಾದಾಗ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ದೂಷಿಸುತ್ತಾರೆ ಹಾಗೂ ಅವರ ವಿರುದ್ಧ ದೂರು ದಾಖಲಿಸುವ ಚರ್ಚೆಯನ್ನು ನಡೆಸುತ್ತಾರೆ. ಸಾಮಾಜಿಕ ಚಿಂತನೆ ಪ್ರತಿಯೊಬ್ಬರಿಗೂ ಅವಶ್ಯಕ ಎಂಬ ಅಂಶವನ್ನು ಇಲ್ಲಿ ಕಾಣಬಹುದು. ಹಾಗೆಯೇ ಮಹಿಳೆಯರಲ್ಲಿ ಬದಲಾವಣೆಯನ್ನು ತರಬೇಕು ಎಂಬ ಉದ್ದೇಶದಿಂದ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದನ್ನು ಕಾಣಬಹುದು. 'ಆಶಾ' ಪತ್ರಿಕೆಯನ್ನು ಸ್ಥಾಪಿಸಿ ಅದರಲ್ಲಿ ಮಹಿಳೆಯರ ಸಮಸ್ಯೆಗಳನ್ನು ಹೊರ ಹಾಕುವ ಪ್ರಯತ್ನ ನಡೆಯುತ್ತದೆ. ಸಾಮಾಜಿಕ ಚಿಂತನೆಯಲ್ಲಿ ತೊಡಗುವ ಉದ್ದೇಶದಿಂದ ಎಲ್ಲರೂ ಒಟ್ಟಿಗೆ ಸೇರಿ ಚರ್ಚಿಸುವ ವ್ಯವಸ್ಥೆಯನ್ನು ಕಾಣಬಹುದು. ಈ ಎಲ್ಲಾ ಅಂಶಗಳು ಸಾಮಾಜಿಕ ಬದಲಾವಣೆಯ ಸಂಕೇತಗಳಾಗಿ ಕಂಡುಬರುತ್ತವೆ.

ಸ್ತ್ರೀಲೋಕ ಕಾದಂಬರಿ ಇಂತಹ ಹಲವು ಸಾಮಾಜಿಕ ಪ್ರಜ್ಞೆಯನ್ನು ಇಟ್ಟುಕೊಂಡು ರಚನೆಯಾಗಿರುವ ಕೃತಿ. ಇಲ್ಲಿ ಸಮಸ್ಯೆಗಳ ಮೂಲವನ್ನು ಚಿಂತಿಸಿ ಅವುಗಳ ಪರಿಹಾರಕ್ಕೆ ಯತ್ನಿಸುವ ಪ್ರಜ್ಞಾವಂತ ಸ್ತ್ರೀಯರು, ಸ್ತ್ರೀ ಸಂಘಟನೆಗಳು, ಸ್ತ್ರೀಯರ ಪ್ರಜ್ಞಾ ಜಾಗೃತ ಶಿಬಿರಗಳು, ಪತ್ರಿಕೆಗಳ ಮೂಲಕ ಮಹಿಳೆಯರಲ್ಲಿ ಅರಿವನ್ನು ಆತ್ಮ ವಿಶ್ವಾಸವನ್ನು ಬೆಳೆಸುವ ಪ್ರಯತ್ನ ಮೆಚ್ಚುವಂತಹದ್ದು.

ಒಟ್ಟಾರೆಯಾಗಿ ಸ್ತ್ರೀಯರ ಹರಟೆಗಳಲ್ಲಿ ಪ್ರಾರಂಭವಾಗಿ ಬದುಕಿನ ಕಷ್ಟ ಸುಖಗಳನ್ನು ಒಬ್ಬರಿಗೊಬ್ಬರು ಹಂಚಿಕೊಂಡು ತಮ್ಮಲ್ಲಿ ತಾವೇ ಉತ್ತರವನ್ನು ಕಂಡುಕೊಳ್ಳುವ 'ಸ್ತ್ರೀಲೋಕ' ಮನೆ ಕೆಲಸದ ಪಾರುವಿನಿಂದ ಹಿಡಿದು ಐ.ಎ.ಎಸ್. ಅಧಿಕಾರಿಯವರೆಗಿನ ಮಹಿಳೆಯ ಮನೋಭಿಲಾಷೆಯನ್ನು ತಿಳಿಸುವ ನಿಟ್ಟಿನಲ್ಲಿ ಸಾಗುತ್ತದೆ. ಮಹಿಳೆಯರ ಅಂತಃಕರಣವನ್ನು ಅರಿತು ತಮ್ಮದೇ ತಂತ್ರಜ್ಞಾನದಲ್ಲಿ ಅದಕ್ಕೆ ಬರಹದ ರೂಪಕೊಟ್ಟು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕಾದಂಬರಿಯನ್ನು ಕೊಟ್ಟ ಶ್ರೇಷ್ಠತೆ ಸವಿತಾ ನಾಗಭೂಷಣ ಅವರಿಗೆ ಸಲ್ಲಬೇಕು.

**ಆಕರ/ಪರಾಮರ್ಶನ ಗ್ರಂಥಗಳು**


- ಶಾಮರಾಯ ತ.ಸು. (2012). *ಕನ್ನಡ ಸಾಹಿತ್ಯ ಚರಿತ್ರೆ.* (ಎರಡನೇ ಮುದ್ರಣ). ಕನ್ನಡ ಸಾಹಿತ್ಯ ಪರಿಷತ್.
- ರಾಮಚಂದ್ರನ್ ಸಿ.ಎನ್. (2013). *ಸಾಹಿತ್ಯ ವಿಮರ್ಶೆ ಮತ್ತು ವಸಾಹತೋತ್ತರ ಚಿಂತನೆ.* ಅಂಕಿತ ಪುಸ್ತಕ
- ಸವಿತಾ ನಾಗಭೂಷಣ. (2021). *ಕಡೇ ಮಾತು.* ಲೋಹಿಯಾ ಪ್ರಕಾಶನ.
- ಸವಿತಾ ನಾಗಭೂಷಣ. (2016). *ಕರುನಾಳು.* ಲೋಹಿಯಾ ಪ್ರಕಾಶನ.
- ಸವಿತಾ ನಾಗಭೂಷಣ. (2009). *ಸ್ತ್ರೀಲೋಕ.* ಅಕ್ಷರ ಪ್ರಕಾಶನ.
- ಸವಿತಾ ನಾಗಭೂಷಣ. (2006). ಕಾಡುಲಿಲ್ಲಿಯ ಹೂಗಳು, ರೂಪ ಪ್ರಕಾಶನ
- ಸವಿತಾ ನಾಗಭೂಷಣ. (2006). ಜಾತ್ರೆಯಲ್ಲಿ ಶಿವ. ಅಕ್ಷರ ಪ್ರಕಾಶನ.